ಯಪ್ಪಾ ಕರಿದೆಂಟು ಬೇಕೆನ್ರೀ' ಎಂದು ಮೆತ್ತಗ ಮಾತ್ತಾಡಿಸಿದ. ನಾನು, 'ವಲ್ಲೆ' ಎನ್ನುವಂತೆ ತಲೆ ಅಲ್ಲಾಡಿಸಿದ ಸೂಚನೆಗೆ ಮತ್ತೆ ಹಲ್ಲು ತೆರೆದು, 'ಮತ್ತೆ..? ಅಪ್ಪನ ಹುಡ್ಕಂಡ ಬಂದ್ರಿ ಏನ್ರೀ, ಅವ್ರು ಆಗ್ಲೇ ಹ್ವಾದ್ರು ಅಲ್ಲರೀ'. ಆತನೆಂದರು ನನ್ನ ಅರಿವಿಗೆ ಆತನ ಮಾತಾಗಲಿ ಕಾಳಜಿಯಾಲಿ ಗೊತ್ತಾಗಲಿಲ್ಲ. ಆತನ ಕೈ ಸನ್ನೆ ಬಾಯಿ ಸನ್ನೆ ಕಂಡರು ನನ್ನ ಮನಸ್ಸು ಇನ್ನೆಲ್ಲೋ ಓಡಿತ್ತು. ಗಂಡಸರ ಗುಂಪಿನಲ್ಲಿ ಇದ್ದಕ್ಕಿದ್ದಂತೆ ಮತ್ತೆ ಜೋರಾದ ನಗು, ಕಿರುಚಾಟ, ಸದ್ದು. ನನಗೆ ಮತ್ತೊಂದೀಟು ದಿಗಿಲು ಬುಗುಲು ಇಟ್ಟು ಭಯ ಅನಸದ್ಕ ಸುರುವಾಯ್ತು. ಭಯ ಅನಿಸಿ ಎದಿ ಜಗ್ಗಿ ಹೊಡ್ಕಕದ್ಕ ಸುರು ಮಾಡಿದ್ಕ ಗಂಟ್ಲ ಒಣಗಿ ನೀರಡಿಕಿ ಅನಿಸಿತು. ಮುಂದೋಗಲು ಹೆಜ್ಜಿ ಕಿತ್ತಿಡದ್ಕ ಕಾಲಾಗ ಪೂರ ಸತುವು ಇಲ್ಲೇನು ಅನಸಾಕತ್ತಿತ್ತು. ಒಳಗಿನಿಂದ ಉಸಿರು ಬಿಗುತ್ತ ಹಿಡಿದು ಭಂಡ ಧೈರ್ಯ ಮಾಡಿಕೇಸಿ ಹೋಗಲು ಅನಿವಾರ್ಯ ಇದ್ದದ್ಕ ಮಾರಿ ತಿರಿವಿ ಅವನಲ್ಲಿ ಇಲ್ಲ ಎಂಬುದನ್ನು ಪೂರ ಖಾತ್ರಿ ಮಾಡಿಕೊಂಡೆ. ಬಹುಶಃ ನನ್ನ ನೋಡಿದ ಅವನು ಅಲ್ಲಿಂದ ಕಾಲು ಕಿತ್ತಿದ್ರು ಖರೇ ಅನಿಸುತ್ತಿತ್ತು. ಇದು ಮೊದಲೇನಲ್ಲ... ಎಷ್ಟು ಸಲ ಕೈ ಕೈಯಾಗಿಂದ ಪುಸಿಗಿಲ್ಲಾ ಹೇಳು?. ಕಾಲು ಮಡಿದು ಬರ್ತೀನಿ ಎಂತಲೋ, ಚಾಹು ಕುಡಿದು ಬರ್ತೀನಿ ಎಂತಲೋ, ಈಗ ಬಂದೆ ತಡಿ ಎನ್ನುತ್ತಲೋ. ಅದು ಇದು ನೆವ ಹೇಳಿದವನೇ ಮಟ ಮಾಯವಾಗುತ್ತಿದ್ದ. ನನ್ನಾಸೆಗೆ ತಣ್ಣೀರು ಚೆಲ್ಲಿ ಸತತವಾಗಿ ತಿಂಗಳು ಪೂರ ಸತಾಯಿಸಿದ್ದ.

ಫೋನ್ ಹಚ್ಚೋಣ ಎಂದರು ನನ್ನ ಕಾಲಾಗ ಪಜೀತೆದ್ದು ಅವಾಗಲೇ ಬ್ಲ್ಯಾಕ್ ಲಿಸ್ಟಿಗೆ ಹಾಕಿದ್ದ. ಮಸ್ಸೇಜು ಮಾಡಿದ್ರು ಅದಕ್ಕೆ ಹಿಂತಿರುಗಿ ಒಂದೂ ಬಂದಿಲ್ಲ. ಕೇಳಿದ್ದಕ್ಕ ಫೋನ್ ಕಳಕಂಡಿನ್ರೀ ಇದು ಬ್ಯಾರೆದವ್ರುದ್ರೀ ಎಂದೇಳಿ ಮಾತಿನಿಂದ ತಪ್ಪಿಸಿಕೊಳ್ಳುತ್ತಿದ್ದ. ಇಲ್ಲಿ ತನಕ ಲೆಕ್ಕ ಇಲ್ಲದಷ್ಟು ಮೆಸ್ಸೇಜುಗಳನ್ನು ಕಳಿವಿದ್ದೀನಿ. ಹ್ಮ...ಅದು ಕೇಳಿದ್ದೆ ತಪ್ಪಾಯ್ತಾ? ಹಿಂಗಾ ಅನಸದ್ಕ ಸುರುವಾತು. ಹೀಗೆ ಒಮ್ಮೊಮ್ಮಿ ಹತ್ತಾರು ಸಾರಿ ಕಣ್ಣು ಮುಂದ ರೆಪ್ಪಿ ಬಡಿ ಬಡೆರದಾಗ ತಪ್ಪಿಸಿಕೊಂಡು ಪರಾರಿಯಾಗುತ್ತಿದ್ದನು. ಒಮ್ಮೊಮ್ಮಿ ದಿಢೀರನೇ ಕಣ್ಣು ಮುಂದನೇ ಕಾಣಿಸಿಕೊಂಡು ದಿಗ್ಭ್ರಮೆ ಮೂಡಿಸುತ್ತಿದ್ದ. ನಾನು ಏನು ಮಾತಾಡಬೇಕೆಂದು ತಿಳಿಯದೆ ಉಗುಳು ನುಂಗಿಕೊಳ್ಳುತ್ತಿದ್ದೆ. ಇಂತ ನಮೂನಿಯ ಭಾವನೆ, ಅನುಭವ ನನ್ನಲ್ಲಿ ಈ ಮೊದಲು ಆಗಿರಲು ಸಾಧ್ಯ ಇಲ್ಲ ಅನಿಸಿತು. ಮ್ಯಾಲ ಮ್ಯಾಲ ಪುಸಿಗಿಕೊಂಡು ತಿರುಗಾಡುತ್ತಿದ್ದವನು ಮಾತು ಹೊರಡದೆ ಹಿಂದೆ ಮುಂದೆ ಕೊಸರಾಡುತ್ತಿದ್ದ. ಒಮ್ಮೊಮ್ಮಿ ಮತ್ತಾಡುತ್ತಿದ್ದಾಗ ನೋಡುವ ಮಂದಿ ನಮ್ಮನ್ನ ನೋಡಕತ್ಯಾರ ಅನಿಸಿತಿತ್ತು ಆಗ. ಹಂಗೆ ನೋಡಲು ಯಾವ ಕಾರಣ ಇಲ್ಲ ಎಂತಲೂ ಅನಿಸಿದ್ರೂ ಆ ಅನುಭವ ಕಾಡಿದ್ದು ನಿಜ. 'ಹಿಂಗ್ಯಾಕೋ, ಸಿಗ್ತಾನೇ ಇಲ್ಲ ಅಲಾ, ಮೀಟ್ ಮಾಡ್ತೀನಿ ಅಂದವ ಪತ್ತೆನೇ ಇಲ್ಲಲ' ಎಂದವನಿಗೆ, 'ಫ್ರೀನೇ ಇಲ್ರೀ, ಅವನೌನ್ ಬರೀ ಕೆಲಸನೇ ಅದಾವ, ಸಿಗಮು ತಗರೀ' ಇಷ್ಟು ಎಂದವನೇ ಮತ್ ಮಾಯವಾಗುತ್ತಿದ್ದ. ಹಾಗಂದಾಗ ನನಗೆ ಜರಾ ಸಮಾಧಾನ ಆಗಿದ್ದಂತು ನಿಜ. ಪೂರ ಒಣಗಿದ ಆಸೆಗೆ ಜೀಂವ ಬಂದಂತೆ.

ಮತ್ತೆ ಮತ್ತೆ ಹುಡುಕಾಡಕತ್ತಿದ್ದೆ. ಅವನು ಇರ ಜಾಡಿ ಜಾಲಾಡಕತ್ತಿದ್ದೆ. ಪೂರ ಕಾಣದಕ್ಕೆ ಅವರ ಓಣಿಗೆ ಹೋಗಾಕ ತೈನಾತಾದೆ. ಆಕಡೆ ಓಣಿಗೆ ಯಾವ ಕಾರಣ ಇಟ್ಟಕೊಂಡು ಹೋಗಲಿ?. ಯಾರನ ಕೇಳಿದ್ರೆ ಏನಂತ ಉತ್ತರಿಸಲಿ?. ಅಂತೆಲ್ಲ ಅನಿಸಿ ಸುಮ್ನಾದೆ. ಆದ್ರೂ ಸುಮ್ನೆ ಕೂಡಕ್ಕೂ ಮನಸ್ಸು ಬರಲಿಲ್ಲ. ಹಿಂಗ್ಯಾಕ ಇಂವ ಪೀಡಸಕತ್ಯಾನ. ರೊಕ್ಕ ರೂಪಾಯಿ ಏನಾದ್ರೂ ಬೇಕಾದ್ರೆ ಕೇಳಂತಾನೂ ಅಂದಿನಿ. ಹ್ಮ... ಏನ್ ಹೆದರಿಕೊಂಡ್ನಾ ಹ್ಯಾಂಗ? ಇರಲಿಕ್ಕಿಲ್ಲ ಬುಡು. ಹಂಗಿತ್ತು ಅಂದ್ರೆ ಅವತ್ತು ಚಾಟಿಂಗದಾಗ ಪೂರ ಕುಲ್ಲಂ ಕುಲ್ಲಾ ಯಾಕ್ ಮಾತ್ತಾಡ್ತಿದ್ದ. ಹ್ಯಾಂಗಾನ ಆಗಲಿ ಅವರ ಓಣಿಗಿ ನಡಿದ್ರಾಯ್ತು ಎಂದು ಮನಸ್ಸಿನ್ಯಾಗ ತೀರ್ಮಾನ ಬಲವಾಗಿ ಮಾಡಿಕೊಂಡೆ.

* * *

ಒಮ್ಮಿನೂ ಕಾಣದ ನೋಡದ ಹೊಲಿಗೇರಿಯಂತ ಅವ್ರ ಓಣಿಗೆ ಹೆಜ್ಜಿ ಇಟ್ಟಾಗ ನಮ್ಮ ಓಣಿನೇ ಬೆಟರ್ ಅನಸಕ್ಕತ್ತಿದ್ದು ಸುಳ್ಳಲ್ಲ. ಗಬ್ಬು ಗಬ್ಬಾದ ನಾತ. ಎಲ್ಲಂದರಲ್ಲಿ ಜಾಲಿಗಿಡಕ್ಕೆ ಜೋತು ಬಿದ್ದು ಒಣಗಿ ಉರುಳುಗಟ್ಟಿದ ದನದ ತೊಗಲಿನ ನಾತಕ್ಕಂತು ಮೂಗು ಕಟ್ಟುತ್ತಿತ್ತು. ಗ್ವಜ್ಜಲ ತುಂಬಿ ಅರೆಕತ್ತಿದ್ದ ಮೋರಿಗಳನ್ನು, ರಾಡಿಯನ್ನು ಜಿಕ್ಕೊಂಡು ಜಿಕ್ಕೊಂಡು ಕಡಿಗಿ ಅವನ ಮನೆ ಅಂಗಳದಾಗ ಬಿದ್ದೆ. ನಾಕಾರು ಸಣ್ಣ ಸಣ್ಣ ಹುಡುಗರು ಮೂಗಿನಿಂದ ಸಿಂಬಳ ಸುರಿದು ಬಾಯಿಗೆ